

# ಬೋಲ್ಡ್ ಲಿಪ್‌ಸ್ಟಿಕ್

## ಅಧರ ಸೌಂದರ್ಯ ವ್ಯಾಖ್ಯಾನ

**ಮಹಿಳೆಯರ ಸೌಂದರ್ಯದಲ್ಲಿ ಅಧರಗಳ ಅಂದವೇ ಮುಂದು. ಹೀಗಾಗಿ, ಅಧರಗಳ ಮೆರುಗು ಹೆಚ್ಚಿಸಬಲ್ಲ ಹಲವು ವಿಧದ ಲಿಪ್‌ಸ್ಟಿಕ್‌ಗಳು ಪೈಪೋಟಿಯಲ್ಲಿವೆ. ಅವುಗಳಲ್ಲಿ ಸದ್ಯ, ಈ 'ಡಾರ್ಕ್ ಲಿಪ್‌ಸ್ಟಿಕ್' ಅಥವಾ 'ಬೋಲ್ಡ್ ಲಿಪ್‌ಸ್ಟಿಕ್' ಹಾಟ್ ಟ್ರೆಂಡ್ ಎನಿಸಿಕೊಂಡಿದೆ.**

■ ಎಸ್ಸೆನ್

ಮಹಿಳೆಯರ ಚೆಲುವಿನ ವರ್ಣನೆಯಲ್ಲಿ ಎಂದಿಗೂ ಮೊದಲಿರುವುದು ತುಟಿಗಳ ಅಂದ ಚೆಂದ. ಹಳೇ ಸಿನಿಮಾಗಳಲ್ಲಿ ನಟಿಯರ ಅಧರಗಳ ಬಣ್ಣನೆ ಹೊತ್ತ ಹಾಡುಗಳೇ ಎಷ್ಟಿಲ್ಲ ಹೇಳಿ? ರೆಟ್ರೊ ಸಿನಿಮಾಗಳಲ್ಲಿ ನಟಿಯರ ಗಾಢ ಬಣ್ಣದ ತುಟಿಗಳೇ ಮೇಕಪ್‌ನ ಆಕರ್ಷಣೆಯಾಗಿತ್ತು. ಕಾಲ ಸರಿದಂತೆ ಮರೆಯಾಗಿದ್ದ ಅದೇ ಮೇಕಪ್ ಶೈಲಿ ಇದೀಗ ಹಾಟ್ ಟ್ರೆಂಡ್ ಆಗಿದೆ.

ಸೌಂದರ್ಯ ಜಗತ್ತಿನಲ್ಲಿ, ಉಡುಪು, ಕೇಶವಿನ್ಯಾಸ, ಮೇಕಪ್ ಯಾವುದೇ ಇರಲಿ, ಹಳೇ ಜಮಾನದ ಶೈಲಿಗಳೇ ಒಂದಲ್ಲಾ ಒಂದು ರೂಪದಲ್ಲಿ ಮತ್ತೆ ಟ್ರೆಂಡ್‌ಗೆ ಬಂದುಬಿಡುತ್ತವೆ. ಅದರಲ್ಲೀಗ ಗಾಢ ಬಣ್ಣದ ಲಿಪ್‌ಸ್ಟಿಕ್‌ಗಳ ಸರದಿ. ಈ 'ಡಾರ್ಕ್ ಲಿಪ್‌ಸ್ಟಿಕ್' ಅಥವಾ 'ಬೋಲ್ಡ್ ಲಿಪ್‌ಸ್ಟಿಕ್' ಸದ್ಯ ಯುವತಿಯರ ಇಷ್ಟದ ಆಯ್ಕೆಯಾಗಿದೆ.

'ಬೋಲ್ಡ್ ಲಿಪ್‌ಸ್ಟಿಕ್' ಮತ್ತೆ ಮುನ್ನೆಲೆಗೆ ಬರಲು, ಟ್ರೆಂಡಿ ಎನಿಸಿಕೊಳ್ಳುವ ಜೊತೆಗೆ ಎಲ್ಲರ ಗಮನ ಸೆಳೆಯಬಲ್ಲದು ಎಂಬ ಕಾರಣ ಒಂದಾದರೆ, ಚಳಿಗಾಲ ಮತ್ತೊಂದು ನೆಪವಾಗಿದೆ. ಚಳಿಗಾಲದಲ್ಲಿ 'ಬೋಲ್ಡ್ ಲಿಪ್' ಸೌಂದರ್ಯ ಪರಿಕಲ್ಪನೆ ವಿಶೇಷವೆನಿಸಿದ್ದು, ಅದಕ್ಕೆ ಹೇಳಿ ಮಾಡಿಸಿದಂತೆ ತುಟಿಗಳನ್ನು ಆಕರ್ಷಕವಾಗಿ ಕಾಣಿಸಬಲ್ಲ ಹೈಡೆಫಿನಿಷನ್ ಬಣ್ಣಗಳಿಗೆ ಒತ್ತು ನೀಡಲಾಗುತ್ತಿದೆ.

### ಚಳಿಗಾಲದಲ್ಲಿ ಗಾಢ ಬಣ್ಣಗಳು

ಚಳಿಗಾಲದಲ್ಲಿ ಕಳೆಗುಂದುವ ಮುಖದ ಸೌಂದರ್ಯ ಹೆಚ್ಚಿಸಲು ಗಾಢ ಬಣ್ಣಗಳನ್ನು ತುಟಿಗೆ ಬಳಸುವುದು ರೂಢಿ. ಮುಖಕ್ಕೆ ಮೇಕಪ್ ಕಡಿಮೆಯಿದ್ದರೂ ಲಿಪ್‌ಸ್ಟಿಕ್ ಅದನ್ನು

